ವಿ.ಹಮೀದ್, ವಿಟ್ಲ
ಅಮ್ಮನಿಗೂ, ಪತ್ನಿಗೂ ಇರುವ ವ್ಯತ್ಯಾಸವೇನು ಗುರೂ?



ಅಕಟಕಟಾ! ಏಂ ಪೇಳಲಿ! ಈ ಅಂಕಣವಲ್ಲ, ಸಂಚಿಕೆ ತುಂಬಿದರೂ ಮುಗಿಯದಷ್ಟಿದೆ ವ್ಯತ್ಯಾಸ

ಹೆಚ್. ಕಾರಿಯಪ್ಪ, ಕಲ್ಬುರ್ಗಿ
ನಾವು ಕಾಲದಲ್ಲಿ ಬದುಕುತ್ತಿದ್ದೇವೋ, ಗಾಳಿಯಲ್ಲಿ ಬದುಕುತ್ತಿದ್ದೇವೋ?
ದುಷ್ಕಾಲದಲ್ಲಿ ಕಂಗಾಳಿಗಳಂತೆ ಬದುಕುತ್ತಿದ್ದೇವೆ.

ರಮೇಶ್, ಹನುಮನಾಳು
ಇಲ್ಲೊಬ್ಬಳು ನನ್ನ ಕೈಗೆ ಮೆಹಂದಿ ಡಿಸೈನ್ ಹಾಕುವಳಂತೆ. ಹಾಕಿಸಿಕೊಳ್ಳಲಾ ರಾಮ್?
'ಮೆ' ಅಕ್ಷರ ಹೇಳಿಲ್ಲವಂತಲ್ಲಾ....

ಸಿ. ಆನಂದಪ್ಪ, ಬೆಂಗಳೂರು
ಜಂಬೂ ಸವಾರಿಗೂ, ಬೊಂಬೂ ಸವಾರಿಗೂ ವ್ಯತ್ಯಾಸವೇನು?
ಅಲ್ಲಿ ಡೌಲು; ಇಲ್ಲಿ ಡೋಲು.

ಪಿ. ಜಯವಂತ ಪೈ, ಕುಂದಾಪುರ
ಮಳೆಗೂ, ಮಹಿಳೆಗೂ ವ್ಯತ್ಯಾಸವೇನು?



ಅಲ್ಲಿ ಮಿಂಚು ಕ್ಷಣಿಕ; ಇಲ್ಲಿ ಮಿಂಚು ನಿರಂತರ.

ಪ್ರಾರ್ಥನಾ ರಾಜ್, ಊರಿಲ್ಲ
'ರತ್ನಾ' ಎಂದು ಕರೆದಾಗ ಸಂಭ್ರಮಿಸುವ ಮನ, 'ರತ್ನಮ್ಮ' ಎಂದಾಗ ನಿಧಾನಿಸಲು ಕಾರಣವೇನು?
ಸಲಿಗೆಯ ಹಗುರತೆಗೆ ಹೊಂದಿಕೊಂಡ ಮನಕ್ಕೆ ಗೌರವ ಭಾರ ಎನಿಸುತ್ತದೆ.

ಎಚ್.ಆರ್. ಪ್ರಕಾಶ್, ಹೊಸನಗರ
ಪ್ರೀತಿನೇ ಆ ದ್ಯಾವ್ರು ತಂದ ಆಸ್ತಿ. ಮುಂದೆ?
ಮದುವೆಯೇ ಷೇರು ಮಾರುಕಟ್ಟೆ; ಮಕ್ಕಳೇ ಡಿವಿಡೆಂಡ್ಸ್.

ಡಾ. ತಿಮ್ಮರಾಜು, ದಾವಣಗೆರೆ
ಲಾಕ್‌ಡೌನ್‌ಗೂ, ಲಾಕ್ ಅಪ್‌ಗೂ ಏನು ಸಂಬಂಧ ಸ್ವಾಮಿ?
ಸರ್ಕಾರವೇ. ಲಾಕ್ಡೌನಲ್ಲಿ ಗುಂಪು ಕೂಡಿಸಿದರೆ ಲಾಕಪ್ಪು.

ಸುಬ್ಬಲಕ್ಷ್ಮಿ ಹೆಚ್.ಕೆ. ಕೋಲಾರ
ಲಾಕ್‌ಡೌನ್‌ನಿಂದ ನಿಮಗಾದ ಉಪಯೋಗವೇನು?
ಹೊಸ ಅಳತೆಗೆ ಹೊಂದುವ ಹೊಸ ಉಡುಪುಗಳು!

ಪಿ.ಜೆ. ರಾಘವೇಂದ್ರ, ಮೈಸೂರು
ಸಿಎಂ ಬದಲಾವಣೆಗೂ, ಸಿಮ್ ಬದಲಾವಣೆಗೂ ಇರುವ ವ್ಯತ್ಯಾಸ?
ಸಿಮ್ ಬದಲಿಸುವ ಮುನ್ನ 'ಬದಲಿಸಲ್ಲ, ಬದಲಿಸಲ್ಲ' ಎಂಬ ಬೊಬ್ಬೆ ಇರುವುದಿಲ್ಲ.

ಮಂಡಿ ಕುಮಾರ್, ಬೆಂಗಳೂರು
ಎಲ್ಲರೂ ಸಂತೋಷವಾಗಿರಬೇಕಾದರೆ ಏನಾಗಬೇಕು?
ಎಲ್ಲರೂ ಇತರರ ಸಂತೋಷದಲ್ಲಿ ಸಂತೋಷ ಕಾಣುವಂತಾಗಬೇಕು.

ವಿ. ಹೇಮಂತಕುಮಾರ್, ಬೆಂಗಳೂರು
ಬಾನಿಂದ ಬಿದ್ದ ಹನಿ, ಹೆಂಡತಿಗೆ ಹೋದ ಮನಿ ಎರಡೂ ಏನಾಗುತ್ತೆ ರಾಮ್?
ಅಂತರ್ಜಲ, ಆಪದ್ಧನ ಆಗತ್ತೆ ಹೇಮ್.

ಬಿ.ಎಂ. ಮಾರುತಿ, ಊರಿಲ್ಲ
ಕೈ ಕೆಸರಾದರೆ ಬಾಯಿ ಮೊಸರು. ಕಾಲು ಕೆಸರಾದರೆ?
ಕಣ್ಣೆಸುರು.

ಶ್ರುತಿ ರಿಗ್ರೆಟ್ ಐಯ್ಯರ್, ಬೆಂಗಳೂರು
ಕಾಯಿಲೆಗಳಲ್ಲಿ ಮಹಾ ಕಾಯಿಲೆ ಯಾವುದು?
ನಿರ್ಲಕ್ಷ್ಯ.

ಎಚ್. ಸಿದ್ದಾರ್ಥ ಹೆಬ್ಬಾರ್, ಈದು ಗ್ರಾಮ
ಪ್ರಕೃತಿಯಲ್ಲಿ ಒಂದು ಅಕ್ಷರ ಮಾಯವಾದರೆ ಪ್ರಕೃತಿಗೆ ಒದಗುವ ಅಪಾಯ ಏನು?
'ಪ್ರತಿ' ಅರ್ಥಾತ್ ನಕಲುಗಳು ಮಾತ್ರ ಉಳಿದು, ಅಸಲುಗಳು ಮಾಯವಾಗುತ್ತವೆ.

## ಬಹುಮಾನಿತ ಪ್ರಶ್ನೆ

ಜೆ.ಆರ್. ಆದಿನಾರಾಯಣಮುನಿ, ಬೆಂಗ್ಳೂರು
ನಮ್ಮ ಕಾಲುಗಳು ಆಕಾಶವನ್ನು ಏಕೆ ಮೆಟ್ಟಿ ನಿಲ್ಲಬಾರದು?
ನಿಲ್ಲಬಹುದು. ಬಾಬಾಬುಡನ್‌ಗಿರಿಯನ್ನು ಏರಿ ಶೀರ್ಷಾಸನ ಹಾಕಿ.

ಎನ್.ಕೆ. ಹೆಬ್ಬಾರ, ಕೋಣೆ
ಸಾಕಷ್ಟು ಉಪದೇಶ ಕೊಡುವವರಿಗೆ ನಿಮ್ಮ ಸಲಹೆ ಏನು?
ಹೇಳುವುದನ್ನು ಕಾವಿ ಧರಿಸಿ ಹೇಳಿ. ಒಳ್ಳೆಯ ಸಂಪಾದನೆ ನಿಶ್ಚಿತ.

ಟಿ.ಎಂ. ಮಾನಪ್ಪ, ಶಿವಮೊಗ್ಗ
ಬೆವರು ಸುರಿಸುವ ಬಡವನ ಮನೆಯಲ್ಲಿಯೇ ದೇವರು ಇರುವುದಂತೆ. ಹೌದಾ?
ಇರಬೇಕು. ಕೃಷ್ಣನು ಕೌರವನ ಅರಮನೆಗೆ ಊಟಕ್ಕೆ ಹೋಗದೆ ವಿದುರನ ಮನೆಗೆ ಹೋದ.

ಜಗದೀಶ ಬಿ. ಹೊಸೂರು, ಮೈಸೂರು
ಮನೆಯಲ್ಲಿ ಪೂಜಿಸಿದ ಫೋಟೊವನ್ನು ಅರಳಿಮರದ ಬುಡದಲ್ಲಿಟ್ಟಾಗ ದೇವರು ಎಲ್ಲಿರುತ್ತಾನೆ?



ದೇವರು ಕಲ್ಪನೆಯ ಕೂಸು; ಎಲ್ಲಿ ಕಲ್ಪಿಸಿಕೊಳ್ಳುವಿರೋ ಅಲ್ಲಿರುತ್ತಾನೆ.

ರಾಜೀವ್ ಮಾಗಲ್, ಸಕಲೇಶಪುರ
ಕೊರೊನಾ ಕಾರಣಕ್ಕೆ ಬಂಧುಗಳಿಲ್ಲದೆ ಜರುಗುತ್ತಿರುವ ಮದುವೆಗಳಿಗೆ 'ಊಹಾನ್ ವಿವಾಹ' ಎನ್ನಬಹುದೆ?
ಅನ್ನಬಹುದು. ಆದರೆ ದಂಪತಿಗಳಲ್ಲಿ ಬಾವಲಿ ಯಾರು, ವೈರಸ್ ಯಾರೆಂದು ನಿರ್ಧರಿಸುವುದು ಕಷ್ಟ.

■ ರಾಮ್

ಪ್ರಶ್ನೆ ಕಳುಹಿಸಲು: editorsu@sudha.co.in